both under rule 312 and also under 289. I trust and hope thees notices will receive sympathetic consideration.

MR. SPEAKER.—I have received those notices. I am at it. I must look into those things also. A notice is given. I should exercise my mind. I am at it.

SRI A. LAKSHMISAGAR.—I leave it at that stage.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ ಮಾನ್ಯ ಕಾರ್ಮಿಕ ಮಂತ್ರಿಯವರು ಉತ್ತರ ಕೊಡುವಾಗ ಕಾರ್ಮಿಕರ ಬಗ್ಗೆ ಮತ್ತು ಪಬ್ಲಿಕ್ ಸೆಕ್ಟಾರ್ ಸ್ಟ್ರೈಕ್ ಬಗ್ಗೆ ಕೆಲವು ಸತ್ಯಕ್ಕೆ ದೂರವಾದ ವಿಷಯಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಕೆಲವು ವಿವರಗಳನ್ನು ಕೇಳುವುದಕ್ಕೆ ನಮಗೆ ಅವಕಾಶವಾಗಲಿಲ್ಲ. ಅವರು ಹೇಳಿದ್ದೆನ್ನು ನಾವು ಒಪ್ಪಿಕೊಳ್ಳುವ ಹಾಗೇ ಇಲ್ಲ. ಅದನ್ನು ಪ್ರತಿಭಟಿಸಿ ನಾನು ವಾಕ್‌ಔಟ್ ಮಾಡುತ್ತೇನೆ.

ಶ್ರೀ ಬಿ.ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ ಬೆಳಿಗ್ಗೆ ಈ ಅಧ್ಯಕ್ಷಸ್ಥಾನದಲ್ಲಿದ್ದ ಮಾನ್ಯ ಉಪಾಧ್ಯಕ್ಷರು 'ಮಾನ್ಯ ಮಂತ್ರಿಯವರು ಮಾತನಾಡುವಾಗ ವಿವರಗಳನ್ನು ಕೇಳಬೇಡಿ, ಅವರು ಹೇಳಿದ ಮೇಲೆ ಕೇಳಿ' ಎಂದು ಹೇಳಿದರು. ಮಾನ್ಯ ಮಂತ್ರಿಯವರು ಎಲ್ಲವನ್ನೂ ಹೇಳಿದಮೇಲೆ ನಾವು ವಿವರಣೆ ಕೇಳುವುದಕ್ಕೆ ಅವಕಾಶ ಸಿಕ್ಕುತ್ತದೆ ಎಂದು ನಾವು ತಿಳಿದುಕೊಂಡಿದ್ದೆವು ಆದರೆ ನಮಗೆ ವಿವರಣೆ ಕೇಳುವು ಸಿಕ್ಕುತ್ತದೆ ಎಂದು ನಾವು ತಿಳಿದುಕೊಂಡಿದ್ದೆವು ಆದರೆ ನಮಗೆ ವಿವರಣೆ ಕೇಳುವುದಕ್ಕೆ ಅವಕಾಶ ಸಿಕ್ಕಲಿಲ್ಲ. ಅವರು ಏನು ಪ್ರಸ್ತಾಪ ಮಾಡಿದ್ದಾರೆ ಅದರಲ್ಲಿ ಬಹಳ ದೋಷಗಳು ಇವೆ

ಅಧ್ಯಕ್ಷರು.—ಅವರು ಪ್ರಸ್ತಾಪ ಮಾಡಿದ್ದರಲ್ಲಿ ದೋಷಗಳು ಇದ್ದರೆ, ಆದರ ಬಗ್ಗೆ ನೀವು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದ್ದರೆ ಆ ಅವಕಾಶವನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ನಿಮಗೆ ಹಕ್ಕು ಇದೆ. ನಿಮ್ಮ ಹಕ್ಕನ್ನು ಯಾರೂ ಮೊಟಕು ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ವಿ. ಕಕ್ಕಿಲಾಯ.—ನಾವು ಈ ಬಗ್ಗೆ ಒಂದು ನೋಟೀಸ್ ಕೊಟ್ಟಿದ್ದೇವೆ ಮತ್ತು ಆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳುತ್ತಿದ್ದೇವೆ.

ಅಧ್ಯಕ್ಷರು.—ಅದನ್ನು ನಾನು ನೋಡುತ್ತಿದ್ದೇನೆ. ಆ ನೋಟೀಸ್ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಆಗಲೇ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಕಾರ್ಮಿಕ ಖಾತೆಗೆ ಸಂಬಂಧ ಪಟ್ಟಂತಹ ಬೇಡಿಕೆಯನ್ನು ಈ ಸಭೆಯಲ್ಲಿ ಪೋಟ್‌ಗೆ ಹಾಕಿ ಆದಮೇಲೆ ಮತ್ತೆ ಅದೇ ಡಿಮ್ಯಾಂಡ್ ಬಗ್ಗೆ ನೀವೆಲ್ಲಾ ಪ್ರಸ್ತಾಪ ಮಾಡಿದರೆ ಅದು ಒಳ್ಳೆಯ ಪ್ರಿಸಿಡೆಂಟ್ ಆಗುವುದಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ ಆದದ್ದು ಒಳ್ಳೆಯ ಪ್ರಿಸಿಡೆಂಟೇ? ಮಾನ್ಯ ಮಂತ್ರಿಯವರು ಈ ಡಿಮ್ಯಾಂಡ್ ಬಗ್ಗೆ ಉತ್ತರ ಕೊಡತಕ್ಕಂಥಾದ್ದು ಮುಗಿದಮೇಲೆ ನಾವೆಲ್ಲಾ ಕ್ಲಾರಿಫಿಕೇಷನ್ಸ್ ಕೇಳುವುದಕ್ಕೆ ಅವಕಾಶವಿವೆ ಆದರೆ ಕ್ಲಾರಿಫಿಕೇಷನ್ಸ್ ಕೇಳುವುದಕ್ಕೆ ನಮಗೆ ಅವಕಾಶ ಕೊಡಲಿಲ್ಲ ಮಾನ್ಯಮಂತ್ರಿಯವರ ಉತ್ತರ ಮುಗಿದಕೂಡಲೇ ಆ ಬೇಡಿಕೆಯನ್ನು ಓಟಿಗೆ ಹಾಕಿದ್ದರಿಂದ ಕ್ಲಾರಿಫಿಕೇಷನ್ಸ್ ಕೇಳತಕ್ಕಂಥ ನಮ್ಮ ಹಕ್ಕಿಗೆ ಚ್ಯುತಿ ಬಂದಹಾಗೆ ಆಗಿದೆ. ಆಗಿದ್ದು ಆಗಿ ಹೋಯಿತು. ತಾವು ಈಗಲಾದರೂ ಈ ವಿಚಾರವನ್ನು ಇದರಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ನಾನು ನೀವು ಕೊಟ್ಟಿರತಕ್ಕಂಥ ನೋಟಿಸನ್ನು ನೋಡುತ್ತಿದ್ದೇನೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಸ್ವಾಮಿ, ನಾವು ಈ ಬಗ್ಗೆ ನೋಟೀಸ್ ಕೊಟ್ಟಿರತಕ್ಕಂಥ ವಿಚಾರದಲ್ಲಿ ಅಲ್ಲದೇ, ಬಾಕಿ ವಿಚಾರಗಳಲ್ಲಿ ಸಹ ನಾವು ಕ್ಲಾರಿಫಿಕೇಷನ್ಸ್ ಕೇಳುವುದಕ್ಕೆ ಅವಕಾಶವಾಗಿಲ್ಲ. ಮತ್ತು ಆ ಸತ್ಯಾಂಶ ಏನಿದೆ ಅದು ರೇಕಾರ್ಡ್‌ಗೆ ಸರಿಯಾಗಿ ಹೋಗುವುದಕ್ಕೂ ಅವಕಾಶವಾಗಿಲ್ಲ. ಆದ್ದರಿಂದ ಸಾರ್ವಜನಿಕರು ನಮ್ಮ ಬಗ್ಗೆ ತಪ್ಪು ತಿಳಿದುಕೊಳ್ಳುತ್ತಾರೆ. ತಾವು ಈಗ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತಾ ಇಲ್ಲ. ನಾನು ಇದನ್ನು ಪ್ರತಿಭಟಿಸಿ ಹೊರಗೆ ಹೋಗುತ್ತೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಬಿ. ಭಾಸ್ಕರಶೆಟ್ಟಿ,—ಸ್ವಾಮಿ, ಅದಕ್ಕೆಲ್ಲಾ ಮಾನ್ಯ ಮಂತ್ರಿಯವರು ಉತ್ತರವನು ಕೊಟ್ಟಿದ್ದಾರೆ.